**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀಮರಿತಿಬ್ಬೇಗೌಡ ಇವರು ನಿಯಮ 72ರಡಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ ನೀಡುವ ಬಗ್ಗೆ**

ವಿಷಯ: ಮಂಡ್ಯದಲ್ಲಿರುವ **ಮೈಶುಗರ್** ಹಾಗೂ ಪಾಂಡವಪುರ ಸಕ್ಕರೆ ಕಾರ್ಖಾನೆ ಕಬ್ಬು ಅರೆಯುವುದನ್ನು **ದೀರ್ಘ** ಕಾಲದಿಂದ ಸಂಪೂರ್ಣವಾಗಿ ಸ್ಥಗಿತಗೊಳಿಸಿರುವುದರಿಂದ ಕಬ್ಬು ಬೆಳೆಗಾರರು **ಆತಂಕ**ದಲ್ಲಿರುವ ಗಂಭೀರ ಸಮಸ್ಯೆ ಬಗ್ಗೆ.

**ಸರ್ಕಾರದ ಉತ್ತರ:**

ಪಾಂಡವಪುರ ಸಹಕಾರಿ **ಸಕ್ಕರೆ** ಕಾರ್ಖಾನೆಯು 2016-17ನೇ ಸಾಲಿನಿಂದ 2019-20ನೇ ಸಾಲಿನವರೆಗೆ ಒಟ್ಟು 4 **ವರ್ಷಗಳಿಂದ** ದುಡಿಯುವ ಬಂಡವಾಳದ ಕೊರತೆ ಹಾಗೂ ಇತರೆ ಕಾರಣಗಳಿಂದಾಗಿ ಕಬ್ಬು ನುರಿಸುವ ಕಾರ್ಯವನ್ನು ಸ್ಥಗಿತಗೊಳಿಸಿರುತ್ತದೆ. ಮಂಡ್ಯ ಜಿಲ್ಲೆಯ ಮೈಸೂರು ಸಕ್ಕರೆ ಕಂಪನಿ **ಮತ್ತು** ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಗಳು ಸ್ಥಗಿತಗೊಂಡಿರುವುದರಿಂದ **ಈ ಕಾರ್ಖಾನೆಗಳ** ವ್ಯಾಪ್ತಿಯಲ್ಲಿ ಬೆಳೆದಂತಹ ಕಬ್ಬನ್ನು ರೈತರ ಹಿತದೃಷ್ಟಿಯಿಂದ **ಪೂರ್ಣವಾಗಿ** ನುರಿಸುವ ಬಗ್ಗೆ ಚರ್ಚಿಸಲು ದಿನಾಂಕ 20.09.2019 ರಂದು ಮಾನ್ಯ ಉಪ ಮುಖ್ಯಮಂತ್ರಿ**ಗಳು** ಹಾಗೂ ಉನ್ನತ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 23.09.2019ರಂದು ಜಿಲ್ಲಾಧಿ**ಕಾರಿಗಳು**, ಮಂಡ್ಯಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ಮಂಡ್ಯ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳ **ಅಧಿಕಾರಿಗಳ** ಸಭೆಯನ್ನು, ತದನಂತರ ಈ ಸಂಬಂಧ ಮಾನ್ಯ ಕಂದಾಯ ಸಚಿವರು ಹಾಗೂ ಮಂಡ್ಯ **ಜಿಲ್ಲಾ**ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಮತ್ತೊಂದು ಸಭೆಯನ್ನು ಹಾಗೂ ದಿನಾಂಕ 17.12.2019 ರಂದು ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಅಧ್ಯಕ್ಷತೆ**ಯಲ್ಲಿ** ಸಭೆಯನ್ನು ಜರುಗಿಸಲಾಗಿರುತ್ತದೆ.

ಮಂಡ್ಯ ಜಿಲ್ಲೆಯಲ್ಲಿ **ಪ್ರಸಕ್ತ** 2019-20ನೇ ಹಂಗಾಮಿನಲ್ಲಿ ಅಂದಾಜು 36.70 ಲಕ್ಷ ಮೆ.ಟನ್‌ಗಳಷ್ಟು ಕಬ್ಬಿನ **ಲಭ್ಯತೆ** ಇದ್ದು, ಮೈಸೂರು ಸಕ್ಕರೆ ಕಂಪನಿ, ಮಂಡ್ಯ ಇದರ ಕಾರ್ಯವ್ಯಾಪ್ತಿಯಲ್ಲಿ 8.50 **ಲಕ್ಷ ಮೆ**. ಟನ್ ಹಾಗೂ ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಪಾಂಡವಪುರ ಇದರ **ವ್ಯಾಪ್ತಿ**ಯಲ್ಲಿ 7.20 ಲಕ್ಷ ಮೆ. ಟನ್ ಕಬ್ಬಿನ ಲಭ್ಯತೆ ಇರುವುದೆಂದು ಅಂದಾಜಿಸಲಾಗಿರುತ್ತದೆ. ಈ ಎರಡೂ ಕಾರ್ಖಾನೆಗಳ ವ್ಯಾಪ್ತಿಯ ಕಬ್ಬನ್ನು ಕಬ್ಬು ಬೆಳೆಗಾರ ರೈತರ ಹಿತದೃಷ್ಟಿಯಿಂದ ನೆರೆಯ ಸಕ್ಕರೆ ಕಾರ್ಖಾನೆಗಳಾದ ಐ.ಸಿ.ಎಲ್. ಶುಗರ್ಸ್, ಕೆ.ಆರ್.ಪೇಟೆ, ಎನ್.ಎಸ್.ಎಲ್. ಶುಗರ್ಸ್, **ಕೊಪ್ಪ**, ಚಾಮುಂಡೇಶ್ವರಿ ಶುಗರ್ಸ್, ಕೆ.ಎಂ.ದೊಡ್ಡಿ, ಬನ್ನಾರಿ ಅಮ್ಮನ್ ಶುಗರ್ಸ್ ಕಾರ್ಖಾನೆಯ ಅಳಗಂಚಿ, ಕುಂತೂರು ಮತ್ತು ತಮಿಳುನಾಡಿನ ಸತ್ಯಮಂಗಲಂ ಘಟಕಗಳಿಗೆ **ಜಿಲ್ಲಾಧಿ**ಕಾರಿಗಳು, ಮಂಡ್ಯ ಜಿಲ್ಲೆ ಇವರು ಹಂಚಿಕೆ ಮಾಡಿರುತ್ತಾರೆ.

2019-20ನೇ ಸಾಲಿನಲ್ಲಿ ಮೈಸೂರು ಸಕ್ಕರೆ ಕಂಪನಿ ಮತ್ತು ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ ವ್ಯಾಪ್ತಿಯ ಕಬ್ಬನ್ನು ನೆರೆಯ ಸಕ್ಕರೆ ಕಾರ್ಖಾನೆಗಳು ದಿನಾಂಕ 10.03.2020 ರವರೆಗೆ ನುರಿಸಿರುವ ಕಬ್ಬಿನ ವಿವರ ಈ ಕೆಳಕಂಡಂತಿದೆ.

(ಮೆ. ಟನ್‌ಗಳಲ್ಲಿ)

| ಕ್ರ. ಸಂ. | ಕಬ್ಬು ಅರೆದಿರುವ ಕಾರ್ಖಾನೆಯ ಹೆಸರು | ಕಾರ್ಖಾನೆಯು ಅರೆದಿರುವ ನೋಂದಾಯಿತ ಕಬ್ಬು | ಮೈಸೂರು ಸಕ್ಕರೆ ಕಂಪನಿ | ಪಾಂಡವಪುರ ಸಸಕಾ | ವ್ಯಾಪ್ತಿ ಪ್ರದೇಶದ ಹೊರಗಿನ ಕಬ್ಬು | ಒಟ್ಟು |
|---|---|---|---|---|---|---|
| 1 | ಐ.ಸಿ.ಎಲ್. ಶುಗರ್ಸ್, ಕೆ.ಆರ್.ಪೇಟೆ | 663440 | 22312 | 79724 | 42927 | 808403 |
| 2 | ಎನ್‌ಎಸ್‌ಎಲ್ ಶುಗರ್ಸ್, ಕೊಪ್ಪ | 670731 | 283869 | 37980 | - | 992580 |
| 3 | ಚಾಮುಂಡೇಶ್ವರಿ ಶುಗರ್ಸ್, ಕೆ.ಎಂ. ದೊಡ್ಡಿ | 663828 | 62531 | 28459 | 117111 | 871929 |
| 4 | ಬನ್ನಾರಿ ಅಮ್ಮನ್ ಶುಗರ್ಸ್, ಅಳಗಂಚಿ ಮತ್ತು ಕುಂತೂರು | - | 340868 | 186666 | - | 527534 |
| 5 | ಬನ್ನಾರಿ ಅಮ್ಮನ್ ಶುಗರ್ಸ್, ಸತ್ಯಮಂಗಲಂ, ತಮಿಳುನಾಡು | - | 22583 | 70653 | - | 93236 |
| | ಒಟ್ಟು | 1997999 | 732163 | 403482 | 160038 | 3133644 |

ಮಂಡ್ಯ ಜಿಲ್ಲೆಯಲ್ಲಿ 2019-20ನೇ ಸಾಲಿಗೆ ಒಟ್ಟು36.70 ಲಕ್ಷ ಮೆ.ಟನ್ ಕಬ್ಬು ಲಭ್ಯತೆ ಇರುವುದಾಗಿ ಅಂದಾಜಿಸಲಾಗಿದೆ. ಈ ಸಾಲಿನಲ್ಲಿ ಈಗಾಗಲೇ ಈವರೆಗೆ 31.34 ಲಕ್ಷ ಮೆ.ಟನ್ ಕಬ್ಬನ್ನು ಅರೆಯಲಾಗಿದ್ದು, ಉಳಿದ 5.36 ಲಕ್ಷ ಮೆ. ಟನ್ ಕಬ್ಬನ್ನು ಅರೆಯಬೇಕಾಗಿರುತ್ತದೆ. ಮೈಸೂರು ಸಕ್ಕರೆ ಕಂಪನಿ ಮತ್ತು ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಗಳು ಸ್ಥಗಿತಗೊಂಡಿದ್ದು, ಈ ಎರಡೂ ಕಾರ್ಖಾನೆಗಳ ವ್ಯಾಪ್ತಿ ಪ್ರದೇಶದಲ್ಲಿ ಬೆಳೆದಂತಹ ಒಟ್ಟು ಕಬ್ಬಿನ ಪ್ರಮಾಣ 15.70 ಲಕ್ಷ ಮೆ.ಟನ್‌ಗಳಾಗಿರುತ್ತದೆ. ಈ ಪೈಕಿ ಈವರೆವಿಗೆ 11.36 ಲಕ್ಷ ಮೆ.ಟನ್‌ಗಳನ್ನು ನೆರೆಯ ಸಕ್ಕರೆ ಕಾರ್ಖಾನೆಗಳು ಅರೆದಿರುತ್ತವೆ. ಅಂದಾಜು 4.00 ಲಕ್ಷ ಮೆ. ಟನ್ ಕಬ್ಬನ್ನು ಬೆಲ್ಲ ತಯಾರಿಕಾ ಘಟಕಗಳಿಗೆ ಸರಬರಾಜು ಮಾಡಲಾಗಿದೆ. ಬಾಕಿ ಉಳಿದ 1.36 ಲಕ್ಷ ಮೆ.ಟನ್‌ಗಳಷ್ಟು ಕಬ್ಬು ನುರಿಸಲು ಲಭ್ಯವಿರುತ್ತದೆ. ಪ್ರಸ್ತುತ ಹಂಗಾಮು ಇನ್ನೂ ಚಾಲ್ತಿಯಲ್ಲಿರುವುದರಿಂದ ಲಭ್ಯವಿರುವ ಎಲ್ಲಾ ಕಬ್ಬನ್ನು ನೆರೆಯ ಸಕ್ಕರೆ ಕಾರ್ಖಾನೆಗಳಲ್ಲಿಯೇ ನುರಿಸಲು ಅವಕಾಶವಿರುತ್ತದೆ.

ಮೇಲ್ಕಾಣಿಸಿದ ಕಾರ್ಖಾನೆಗಳ ಪೈಕಿ ಕಾರ್ಯನಿರತ 5 ಸಕ್ಕರೆ ಕಾರ್ಖಾನೆಗಳ ದಿನಂಪ್ರತಿ ಕಬ್ಬು ಅರೆಯುವ ಸಾಮರ್ಥ್ಯ 24900 ಟಿಸಿಡಿಗಳಾಗಿರುತ್ತದೆ. ಒಂದು ಹಂಗಾಮಿನಲ್ಲಿ ಈ ಕಾರ್ಖಾನೆಗಳು ಅಂದಾಜು 180 ದಿನ ಕಾರ್ಯ ನಿರ್ವಹಿಸಿದಲ್ಲಿ ಒಟ್ಟು ನುರಿಸಬಹುದಾದ ಕಬ್ಬು 45.00 ಲಕ್ಷ ಮೆ.ಟನ್‌ಗಳಾಗಿರುತ್ತದೆ. (24900 ಟಿಸಿಡಿ x 180 ದಿನಗಳು).ಪ್ರಸ್ತುತ ವರ್ಷದಲ್ಲಿ ಮೇಲ್ಕಂಡ ಕಾರ್ಖಾನೆಗಳ ವ್ಯಾಪ್ತಿಯಲ್ಲಿ ಲಭ್ಯವಿರುವ ಕಬ್ಬಿನ ಪ್ರಮಾಣ 52.93 ಲಕ್ಷ ಮೆ.ಟನ್‌ಗಳಾಗಿರುತ್ತದೆ. ಈ ಪೈಕಿ ಶೇ.85 ರಷ್ಟು ಅಂದರೆ 45.00 ಲಕ್ಷ ಮೆ.ಟನ್ ಕಬ್ಬನ್ನು ಸಕ್ಕರೆ

ಉತ್ಪಾದನೆಗೆ ಹಾಗೂ ಶೇ.15 ರಷ್ಟು ಅಂದರೆ 7.93 ಲಕ್ಷ ಮೆ. ಟನ್ ಬೆಲ್ಲ ತಯಾರಿಕೆ ಮತ್ತು ಬೀಜೋತ್ಪಾದನೆಗೆ ಸಾಗಾಣಿಕೆಯಾಗಲಿದೆ. ಅಂದರೆ, ಕಾರ್ಖಾನೆಗಳ ದಿನವಹಿ ಕಬ್ಬು ನುರಿಸುವ ಸಾಮರ್ಥ್ಯಕ್ಕನುಗುಣವಾಗಿ ಲಭ್ಯವಿರುವ ಎಲ್ಲಾ ಕಬ್ಬನ್ನು ನುರಿಸಲು ಕಾರ್ಖಾನೆಗಳು ಶಕ್ಯವಿರುತ್ತವೆ.

ಏತನ್ಮಧ್ಯೆ, ಸರ್ಕಾರದ ಆದೇಶ ಸಂಖ್ಯೆ ವಾಕೈ/24/ಸಸಕಾ/2019 ದಿನಾಂಕ 27.01.2020 ರನ್ವಯ ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಪುನ:ಶ್ಚೇತನಗೊಳಿಸುವ ಸಲುವಾಗಿ 2020-21ನೇ ಹಂಗಾಮಿನಿಂದ 40 ವರ್ಷಗಳ ಅವಧಿಗೆ LROT (Lease Rehabilitate Operate and Transfer) ಆಧಾರದ ಮೇಲೆ 'ಇದ್ದಲ್ಲಿಇದ್ದಂತೆಯೇ' (As is where is basis) ಖಾಸಗಿಯವರಿಗೆ ಗುತ್ತಿಗೆ ನೀಡಲು ಕೆಲವೊಂದು ಷರತ್ತುಗಳಿಗೊಳಪಟ್ಟು ಅನುಮತಿ ನೀಡಿ ಆದೇಶಿಸಿರುತ್ತದೆ. ಸರ್ಕಾರದ ಆದೇಶದಂತೆ ಕಾರ್ಖಾನೆಯನ್ನು 2020-21ನೇ ಸಾಲಿನಿಂದ ಅಂದರೆ ಜೂನ್/ಜುಲೈ 2020ರಿಂದ ಕಾರ್ಯಾರಂಭ ಮಾಡಲು ಟೆಂಡರ್ ಪ್ರಕ್ರಿಯೆಯನ್ನು ಈಗಾಗಲೇ ಕೈಗೊಳ್ಳಲಾಗಿರುತ್ತದೆ.

ಅದೇ ರೀತಿ, ಸರ್ಕಾರದ ಆದೇಶ ಸಂಖ್ಯೆ ವಾಕೈ/05/ಸಸಕಾ/2020 ದಿನಾಂಕ 09.03.2020 ರನ್ವಯ ಮೈಸೂರು ಸಕ್ಕರೆ ಕಂಪನಿ ನಿ., ಮಂಡ್ಯ ಜಿಲ್ಲೆ ಈ ಕಾರ್ಖಾನೆಯನ್ನು ಪುನ:ಶ್ಚೇತನಗೊಳಿಸುವ ಸಲುವಾಗಿ 2020-21ನೇ ಹಂಗಾಮಿನಿಂದ 40 ವರ್ಷಗಳ ಅವಧಿಗೆ LROT (Lease Rehabilitate Operate and Transfer) ಆಧಾರದ ಮೇಲೆ 'ಇದ್ದಲ್ಲಿಇದ್ದಂತೆಯೇ' (As is where is basis) ಖಾಸಗಿಯವರಿಗೆ ಗುತ್ತಿಗೆ ನೀಡಲು ಕೆಲವೊಂದು ಷರತ್ತುಗಳಿಗೊಳಪಟ್ಟು ಅನುಮತಿ ನೀಡಿ ಆದೇಶಿಸಿರುತ್ತದೆ. ಸರ್ಕಾರದ ಆದೇಶದಂತೆ ಕಾರ್ಖಾನೆಯನ್ನು 2020-21ನೇ ಸಾಲಿನಿಂದ ಅಂದರೆ ಜೂನ್/ಜುಲೈ 2020 ರಿಂದ ಕಾರ್ಯಾರಂಭ ಮಾಡಲು ಟೆಂಡರ್ ಪ್ರಕ್ರಿಯೆಯನ್ನು ಸದ್ಯದಲ್ಲೇ ಕೈಗೊಳ್ಳಲಾಗುವುದು.

ರೈತರಿಗೆ ತೊಂದರೆಯಾಗದಂತೆ ಕಬ್ಬನ್ನು ಸಕಾಲದಲ್ಲಿ ನುರಿಸುವ ಮತ್ತು ಕಬ್ಬಿನ ಬಿಲ್ಲನ್ನು ಪಾವತಿಸುವ ವ್ಯವಸ್ಥೆ ಮಾಡಲಾಗಿರುವುದರಿಂದ ಕಬ್ಬು ಬೆಳೆಗಾರ ರೈತರ ಹಿತ ಕಾಪಾಡಲಾಗಿರುತ್ತದೆ. ಇದರಿಂದ ರೈತರು ಆತಂಕಪಡುವ ಅಗತ್ಯವಿರುವುದಿಲ್ಲ. ಅಲ್ಲದೆ, ಮುಂದಿನ ಹಂಗಾಮಿನಿಂದ ಈ ಎರಡೂ ಕಾರ್ಖಾನೆಗಳನ್ನು ಖಾಸಗಿಯವರಿಗೆ ಗುತ್ತಿಗೆ ನೀಡುವ ಮೂಲಕ ಪುನ:ಶ್ಚೇತನಗೊಳಿಸಲು ಸರ್ಕಾರವು ಈಗಾಗಲೇ ಕ್ರಮ ಕೈಗೊಂಡಿರುತ್ತದೆ.

ಸಂಖ್ಯೆ: ವಾಕೈ 73 ಸಿಓಎಫ್ 2020

(ಅರಬೈಲ್ ಶಿವರಾಮ ಹೆಬ್ಬಾರ)
ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು